## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಸ್.ವ್ಹಿ.ಸಂಕನೂರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 650
ಉತ್ತರಿಸಬೇಕಾದ ದಿನಾಂಕ : 21-02-2023
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಗ್ರಾಮೀಣ ಸೇವಾ ಸಹಕಾರಿ ಸಂಘ ಶಿರಾಳಿರವರು ಲೋಕೋಪಯೋಗಿ ಇಲಾಖೆಯಿಂದ ಅನುಮತಿ ಪಡೆದ ಅಂದಾಜು ಪಟ್ಟಿಯ ಮೊತ್ತ ಮೀರಿ ಆಡಿಟ್ ವರದಿಯ ಪ್ರಕಾರ ಹೆಚ್ಚುವರಿ 30 ಲಕ್ಷ ರೂಪಾಯಿ ಹಣ ಸಂದಾಯ ಮಾಡಿರುವ ಸಿಬ್ಬಂದಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು) | ಭಟ್ಕಳ ತಾಲ್ಲೂಕಿನ ಗ್ರಾಮೀಣ ಸೇವಾ ಸಹಕಾರ ಸಂಘ ನಿ., ಶಿರಾಲಿ ಭಟ್ಕಳ ತಾಲ್ಲೂಕು ಈ ಸಂಘವು 2015-16ನೇ ಸಾಲಿನಲ್ಲಿ ನೂತನ ಕಟ್ಟಡ ನಿರ್ಮಿಸಲು ರೂ.44.35 ಲಕ್ಷ ವೆಚ್ಚದಲ್ಲಿ ಲೋಕೋಪಯೋಗಿ ಇಂಜಿನಿಯರ್‌ರಿಂದ ಅನುಮೋದಿಸಲ್ಪಟ್ಟ ನಕಾಶೆ ಮತ್ತು ಅಂದಾಜು ಪಟ್ಟಿಯೊಂದಿಗೆ ಆಡಳಿತಾತ್ಮಕ ಅನುಮತಿ ಪಡೆಯಲು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ರೂ.24.42 ಲಕ್ಷಗಳನ್ನು ಕಟ್ಟಡ ನಿಧಿಯಿಂದಲೂ ರೂ.19.93 ಲಕ್ಷಗಳನ್ನು ಆಪದ್ಧನ ನಿಧಿಯಿಂದಲೂ ಉಪಯೋಗಿಸಿಕೊಂಡು ಕಟ್ಟಡ ನಿರ್ಮಾಣ ಮಾಡಲು ತೀರ್ಮಾನಿಸಿರುತ್ತಾರೆ. ಅದರಂತೆ ಕಟ್ಟಡ ನಿಧಿ ಮತ್ತು ಆಪದ್ಧನ ನಿಧಿಯನ್ನು ಉಪಯೋಗಿಸಿಕೊಂಡು ಕಟ್ಟಡ ನಿರ್ಮಾಣ ಮಾಡಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ ಇವರು ಜೆಆರ್‌ಎಲ್/ಎ/211/ಪಿಎಲ್‌ಎನ್/2015-16 ದಿನಾಂಕ:31-12-2015ರಂದು ಆದೇಶ ಮಾಡಿ ಸಂಘದ ಕಟ್ಟಡ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ. ಈ ರೀತಿ ಅನುಮೋದನೆ ನೀಡಿರುವ ಮೊತ್ತವನ್ನು ಹೊರತುಪಡಿಸಿ ಸಂಘದವರು ರೂ.7.62 ಲಕ್ಷಗಳನ್ನು ಸಂಘಕ್ಕೆ ಇಲಾಖಾ ಅನುಮತಿ ಇಲ್ಲದೇ ಹೆಚ್ಚುವರಿಯಾಗಿ ಖರ್ಚು ಮಾಡಿರುವುದು ಕಂಡುಬಂದಿರುತ್ತದೆ.ಈ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರಡಿ ಶಾಸನಬದ್ಧ ವಿಚಾರಣೆಗೆ ಆದೇಶಿಸಲಾಗಿದ್ದು ವಿಚಾರಣೆ ಪೂರ್ಣಗೊಂಡಿರುತ್ತದೆ. ವರದಿ ಸಲ್ಲಿಸಲು ಬಾಕಿಯಿದ್ದು, ವರದಿ ಸ್ವೀಕೃತವಾದ ನಂತರ ವಿಚಾರಣಾ ವರದಿ ಆಧರಿಸಿ ನಿಯಮಾನುಸಾರ ಕ್ರಮವಿಡಲಾಗುವುದು. |

| | | |
|---|---|---|
| ಆ) | ಸ್ಥಳೀಯ ಗ್ರಾಮ ಪಂಚಾಯತ್‌ನಿಂದ ಕಟ್ಟಡ ಪರವಾನಿಗೆ ಪಡೆಯುವಲ್ಲಿ ತೆರಿಗೆ ವಂಚಿಸಿರುವ ಬಗ್ಗೆ, ಹಾಗೂ ಸಿಬ್ಬಂದಿಗಳ ನೇಮಕಾತಿಯಲ್ಲಿ ನಡೆಸಿರುವ ಅವ್ಯವಹಾರದದಲ್ಲಿ ನಿಯಮ 64 ಮತ್ತು 29ಸಿ ರಡಿ ಉಚ್ಚ ನ್ಯಾಯಾಲಯವು 3 ತಿಂಗಳಲ್ಲಿ ವಿಚಾರಣೆಗೆ ಸೂಚಿಸಿದ್ದು ಹಾಗೂ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯು ದಿನಾಂಕ:10-06-2022ರಂದು ತೆರವಾಗಿದ್ದರೂ ಇಲ್ಲಿಯ ತನಕ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? (ಸಂಪೂರ್ಣ ವಿವರ ನೀಡುವುದು.) | ಸಂಘವು ಕಟ್ಟಡ ನಿರ್ಮಾಣದಲ್ಲಿ ಅನುಮೋದನೆಗಿಂತ ಹೆಚ್ಚುವರಿಯಾಗಿ ವೆಚ್ಚ ಮಾಡಿರುವ ಸಂಬಂಧ ಹಾಗೂ ಸಿಬ್ಬಂದಿ ವೃಂದಬಲಕ್ಕೆ ಇಲಾಖಾನುಮತಿ ಪಡೆದುಕೊಳ್ಳದೇ ಸಿಬ್ಬಂದಿಗಳ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಮಟಾ ಉಪ ವಿಭಾಗ, ಕುಮಟಾರವರು ಆದೇಶ ಸಂಖ್ಯೆ:ಸನಿ-20/ಎ/ವಿಚಾರಣೆ/ಸಿಆರ್-01/2020-21 ದಿನಾಂಕ:08-09-2020 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ಶಾಸನಬದ್ಧ ವಿಚಾರಣೆಗೆ ಆದೇಶಿಸಿರುತ್ತಾರೆ.<br>ಈ ಆದೇಶವನ್ನು ಪ್ರಶ್ನಿಸಿ ಸಂಘವು ಗೌ॥ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ: 147880/2020 ನ್ನು ದಾಖಲಿಸಿ ದಿನಾಂಕ:29-08-2020 ರಂದು ತಡೆಯಾಜ್ಞೆ ಪಡೆದುಕೊಂಡಿರುತ್ತದೆ.<br>ಇಲಾಖಾ ವತಿಯಿಂದ ತಡೆಯಾಜ್ಞೆ ತೆರವಿಗೆ ಕ್ರಮವಿಟ್ಟಿದ್ದು ಗೌ॥ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ದಿನಾಂಕ:20-07-2021 ರಂದು ತಡೆಯಾಜ್ಞೆ ತೆರವುಗೊಳಿಸಿರುತ್ತದೆ ಹಾಗೂ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ.<br>ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ವಿಚಾರಣೆಯನ್ನು ಕೈಗೆತ್ತಿಕೊಂಡು ಈ ಹಿಂದಿನ ವಿಚಾರಣಾಧಿಕಾರಿಯನ್ನು ಬದಲಾಯಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿರಸಿ ಉಪ ವಿಭಾಗ, ಶಿರಸಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶ ಸಂಖ್ಯೆ:ಸನಿ-20/ಎ/ವಿಚಾರಣೆ/ಸಿಆರ್-01/2020-21, ದಿನಾಂಕ:13-09-2021ರಲ್ಲಿ ಆದೇಶಿಸಲಾಗಿದೆ. ವಿಚಾರಣೆ ಪೂರ್ಣಗೊಂಡಿರುತ್ತದೆ, ವಿಚಾರಣಾ ವರದಿ ಸಲ್ಲಿಸಲು ಬಾಕಿಯಿದ್ದು, ವಿಚಾರಣಾ ವರದಿ ಸ್ವೀಕೃತವಾದ ನಂತರ ವಿಚಾರಣಾ ವರದಿ ಆಧರಿಸಿ ನಿಯಮಾನುಸಾರ ಕ್ರಮವಿಡಲಾಗುವುದು.<br>ಸಂಘದ ಅಧ್ಯಕ್ಷರಾದ ಶ್ರೀ ವೆಂಕಟೇಶ ನಾರಾಯಣ ನಾಯ್ಕ್ ಇವರು ಸಂಘದಲ್ಲಿ ಓ.ಡಿ. ಸಾಲ ಪಡೆದು ಸುಸ್ತಿಯಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29ಸಿ ರಡಿಯಲ್ಲಿ ಕ್ರಮ ಕೈಗೊಳ್ಳಲು ದಿನಾಂಕ:27-01-2021ರಲ್ಲಿ ನೋಟೀಸ್ ಜಾರಿಗೊಳಿಸಿ ವಿವರಣೆ ಕೇಳಲಾಗಿದೆ. ಸದರಿ |

| | | |
|---|---|---|
| | | ನೋಟೀಸ್‌ಗೆ ಸಂಘದ ಅಧ್ಯಕ್ಷರು, ಗೌ॥ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:100902/2021ನ್ನು ದಾಖಲಿಸಿದ್ದು ದಿನಾಂಕ:12-03-2021ರಂದು ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ತಡೆಯಾಜ್ಞೆ ನೀಡಿರುತ್ತದೆ.<br>ರಿಟ್ ಅರ್ಜಿಗೆ ತಕರಾರು ಸಲ್ಲಿಸಿ ತಡೆಯಾಜ್ಞೆ ತೆರವುಗೊಳಿಸಲು ಕೋರಿದ್ದು, ಗೌ॥ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ದಿನಾಂಕ:10-06-2022ರಂದು ತಡೆಯಾಜ್ಞೆ ತೆರವುಗೊಳಿಸಿ ರಿಟ್ ಅರ್ಜಿಯಲ್ಲಿ ಅಂತಿಮ ಆದೇಶ ಹೊರಡಿಸಿ 90 ದಿನಗಳೊಳಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29ಸಿ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸುವಂತೆ ಆದೇಶಿಸಿರುತ್ತದೆ.<br>ಗೌ॥ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ ಆದೇಶವು ದಿನಾಂಕ: 27-09-2022ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕುಮಟಾ ಉಪವಿಭಾಗ, ಕುಮಟಾ ಇವರ ಕಛೇರಿಗೆ ಸ್ವೀಕೃತವಾಗಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29ಸಿ ಪ್ರಕರಣದ ವಿಚಾರಣೆಯು ಪೂರ್ಣಗೊಂಡಿದ್ದು, ದಿನಾಂಕ:15-02-2023ರಂದು ಶ್ರೀ ವೆಂಕಟೇಶ ನಾರಾಯಣ ನಾಯ್ಕರವರನ್ನು ಸಂಘದಿಂದ ಅನರ್ಹಗೊಳಿಸಿ ಆದೇಶಿಸಿ, ಪ್ರಕರಣವನ್ನು ವಿಲೇಗೊಳಿಸಲಾಗಿದೆ. |

**ಸಂಖ್ಯೆ: ಸಿಒ 38 ಸಿಎಲ್‌ಎಸ್ 2023**

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**